ರಾಜೀನಾಮೆ ನೀಡಿರುತ್ತಾರೆ. ದಿ:28–8–04 ರಂದು ಜಿ.ಹೆಚ್.ಜಿ ಬಾಲಕೃಷ್ಣ ನಿವೃತ ನ್ಯಾಯಧೀಶರು ಕರ್ನಾಟಕ ಉಚ್ಚ ನ್ಯಾಯಾಲಯ ಇವರನ್ನು ನೇಮಿಸಲಾಗಿತ್ತು, ಆದರೆ ಅವರು ಅದಿಕಾರ ವಹಿಸಿಕೋಳ್ಳುವ ಮುನ್ನವೆ ನಿಧನ ಹೊಂದಿರುತ್ತಾರೆ.

3) ಏಕ ಸದಸ್ಯ ವಿಚಾರಣಾ ಅಂಯೋಗ ನೇಮಕಾತಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

4) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದಲ್ಲಿರುವ ವಿವಿಧ ಉಪಜಾತಿಗಳಿಗೆ ಸಮಾನಾಂತರವಾಗಿ ಮೀಸಲಾತಿಯ ಸೌಲಭ್ಯವನ್ನು ನೀಡುವ ಉದ್ದೇಶಕ್ಕಾಗಿ ಏಕ ಸದಸ್ಯ ಆಯೋಗವನ್ನು ರಚಿಸಲಾಗಿದೆ. ಆಯೊಗಕ್ಕೆ ಅಧ್ಯಕ್ಷರು ಅದಿಕಾರ ವಹಿಸಿಕೂಂಡು ದಿನದಿಂದ 3–6 ತಿಂಗಳ ಅವದಿಯೊಳಗಾಗಿ ವರದಿಯನ್ನು ನೀಡಲು ಕಾಲಮಿತಿ ನಿಗಧಿಪಡಿಸಲಾಗುವುದು.

470(655)ಶ್ರೀ ಸರಕಾರ್ ಭೀಮಪ್ಪ ಚನ್ನಪ್ಪ(ರಾಯಭಾಗ) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000–01ನೇ ಸಾಲಿನ ಸಿ.ಎ.ಜಿ ವರದಿಯಲ್ಲಿ ಕೆ.ಐ.ಎ.ಡಿ.ಬಿ. ಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ತಪ್ಪಿತಸ್ಥ ಅಧಿಕಾರಿಗಳು ಯಾರು?

ಇ) ಅವರ ವಿರುದ್ಧ ಸರ್ಕಾರ ಎನು ಕ್ರಮ ತೆಗೆದುಕೂಂಡಿದೆ?

ಈ) ಕ್ರಮ ತೆಗೆದುಕೂಳ್ಳದಿದ್ದರೆ ಕಾರಣವೇನು?

ಉ) ಎಷ್ಟು ದಿನಗಳೊಳಗೆ ಕ್ರಮ ತೆಗೆದು ಕೊಳ್ಳಲಾಗುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು

ಆ) ಕೆ.ಐ.ಎ.ಡಿ.ಬಿ. ಯಲ್ಲಿ ಈ ವಿಚಾರವನ್ನು ದಿನಾಂಕ : 15–10–2003 ರಂದು ನಡೆದ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಬಿಡದಿ ಕಾಮಗಾರಿ ಕೆಲಸದಲ್ಲಿ ಭೂಸ್ವಾಧೀನ ಕ್ರಿಯೆಯಲ್ಲಿ ಆಗಿರುವ ಅಕ್ರಮಗಳನ್ನು ತನಿಖೆ ಮಾಡಲು ಸಿ.ಓ.ಡಿ.ಗೆ ವಹಿಸಲು ನಿರ್ದರಿಸಿ ದಿನಾಂಕ : 10–11–2003 ರಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದೆ.

ಈ ವಿಚಾರವನ್ನು ಪರಿಶೀಲಿಸಲಾಗುತ್ತಿದೆ.

ಇ) –ಪರಿಶೀಲಿಸಲಾಗುತ್ತಿದೆ–

ಈ) –ಉದ್ಭವಿಸುವುದಿಲ್ಲ–

ಉ) –ಉದ್ಭವಿಸುವುದಿಲ್ಲ–